**ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಘನ ನ್ಯಾಯಾಲಯ ಬ್ಯಾಡಗಿ.**

**ಕ್ರಿಮಿನಲ್ ಪ್ರಕರಣ ಸಂಖ್ಯೆ: 144/2019**

ಪಿಡಬ್ಲ್ಯೂ: 10

ಸಿಡಬ್ಲ್ಯೂ: 14

ಹೆಸರು : ಚಿದಾನಂದ ತಂದೆ: ರಾಜಪ್ಪ

ವಯಸ್ಸು : 48 ವರ್ಷ

ಉದ್ಯೋಗ : ಪೋಲಿಸ್ ನಿರೀಕ್ಷಕರು, ಐ.ಎಸ್ ಡಿ , ದಕ್ಷಿಣ ಕನ್ನಡ

ವಾಸಸ್ಥಳ : ಮಂಗಳೂರು

ದಿನಾಂಕ : 17.06.2023 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ :**

1) ದಿಃ 16-08-2016 ರಿಂದ 30-01-2019 ರವರೆಗೆ ನಾನು ಬ್ಯಾಡಗಿಯಲ್ಲಿ ಸಿ.ಪಿ.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ದಿಃ 20-12-2018 ರಂದು ಚಾಸಾ-13 ರವರಿಂದ ಪ್ರಕರಣದ ತನಿಖೆಯ ಕಡತವನ್ನು ಪಡೆದುಕೊಂಡು ಅದನ್ನು ಕೂಲಂಕಷವಾಗಿ ಪರಿಶೀಲಿಸಿ, ನಂತರ ಘಟನಾ ಸ್ಥಳಕ್ಕೆ ಬೇಟಿ ಪರಿಶೀಲನೆ ಮಾಡಿರುತ್ತೇನೆ. ನಂತರ ಚಾಸಾ-5 ರಿಂದ ಚಾಸಾ-7 ರವರ ಹೇಳಿಕೆಗಳನ್ನು ಪಡೆದುಕೊಂಡು ತನಿಖೆಯ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಚಾಸಾ-1 ರವರ ಪುನರ್ ಹೇಳಿಕೆಯನ್ನು ಪಡೆದುಕೊಂಡು ತನಿಖೆಯ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಸಿ. ಡಿ. ಆರ್. ಸೆಲ್, ಹಾವೇರಿ ಇವರಿಗೆ ಕಳುವಾದ ಮೊಬೈಲ್‌ಗಳಲ್ಲಿ ಬಳಕೆಯಾದ ಬಗ್ಗೆ ಮಾಹಿತಿಯನ್ನು ಕೇಳಿದಾಗ ಇಲ್ಲವೆಂದು ತಿಳಿಸಿರುತ್ತಾರೆ. ನಂತರ ಚಾಸಾ-12 ರವರು ಎರಡು ಘಟನಾ ಸ್ಥಳದಲ್ಲಿ ಚಾನ್ಸ ಪ್ರಿಂಟ್ ಸಿಕ್ಕ ಬಗ್ಗೆ ಮಾಹಿತಿ ನೀಡಿರುತ್ತಾರೆ. ಚಾಸಾ-1 ಚಾಸಾ-5 ಮತ್ತು ಚಾಸಾ-6 ರವರು ಬೆರಳಚ್ಚು ಪಡೆದು ಸ್ಯಾಂಪಲನ್ನು ಕಳುಹಿಸಿಕೊಟ್ಟಿರುತ್ತೇನೆ. ನಂತರ 26.12.2018 ರಂದು ಸಿ. ಡಿ. ಆರ್. ಸೆಲ್, ಹಾವೇರಿ ಇವರಿಂದ ಕಳುವಾದ ಮೊಬೈಲಗಳ ಐ. ಎಂ. ವಿ ನಂಬರ 861102046602577೦, ಸಿಮ್ ಸಂಖ್ಯೆ: 9108085831 ನೇದ್ದನ್ನು ಹಾಕಿ ತೆಗೆದಿದ್ದು, ನಂತರ ಅದರಲ್ಲಿಯೇ 9731347943 ಉಪಯೋಗವಾಗಿದ್ದು ಅದರ ಹಿರೇಕೆರೂರು ಮತ್ತು ಚಿಕ್ಕೇರೂರು ಲೋಕೆಷನ್ ಬಂದಿರುತ್ತದೆ ಎಂದು ಮಾಹಿತಿ ಬಂದಿರುತ್ತದೆ. ಸದರಿ ದಾಖಲೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-39 ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-39(ಎ) ಎಂದು ಗುರುತಿಸಲಾಯಿತು.

3) ಎರಡು ಸಿಮ್‌ಗಳ ಸಿ. ಡಿ. ಆರ್. ಸೆಲ್, ಹಾವೇರಿ ಇವರಿಂದ ಮಾಹಿತಿ ಪಡೆದಿದ್ದು, ಅದರಲ್ಲಿ 2 ನೇ ಆರೋಪಿತನು ಸದರಿ ಮೊಬೈಲನ್ನು ಚಾಸಾ-8 ರವರಿಗೆ ಮಾರಾಟ ಮಾಡಿರುತ್ತಾರೆ. ಚಾಸಾ-8 ರವರನ್ನು ಹಾಜರುಪಡಿಸಲು ಮುಖ್ಯ ಪೇದೆಯನ್ನು ಕಳುಹಿಸಿರುತ್ತೇನೆ. ನಂತರ ಚಾಸಾ-8 ರವರನ್ನು ಠಾಣೆಗೆ ಹಾಜರುಪಡಿಸಿರುತ್ತಾರೆ. ನಂತರ ಆತನ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಚಾಸಾ-2 ಮತ್ತು ಚಾಸಾ-4 ರವರನ್ನು ಹಾಜರುಪಡಿಸಿಕೊಂಡು ಬೆಳಗ್ಗೆ 11-00 ರಿಂದ 11-45 ರವರೆಗೆ ಪಂಚನಾಮೆಯನ್ನು ನಮ್ಮ ಠಾಣೆಯಲ್ಲಿಯೇ ಮಾಡಿ ಮೊಬೈಲಗಳನ್ನು ವಶಪಡಿಸಿಕೊಂಡಿರುತ್ತೇನೆ. ನಿಪಿ-24

ರಲ್ಲಿ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ–24(ಸಿ) ಎಂದು ಗುರುತಿಸಲಾಯಿತು.

4) ಚಾಸಾ–13 ರವರಿಗೆ ಆರೋಪಿತರನ್ನು ಹಾಜರುಪಡಿಸಲು ಆದೇಶ ನೀಡಿರುತ್ತೇನೆ. ದಿಃ 28.12.2018 ರಂದು ಪಿ. ಎಸ್. ಐ ರವರು ಆರೋಪಿತರನ್ನು ಮುಂಜಾನೆ ನನ್ನ ಕಚೇರಿಗೆ ಹಾಜರುಪಡಿಸಿರುತ್ತಾರೆ. ನಂತರ ಆರೋಪಿತರ ಸ್ವಇಚ್ಛಾ ಹೇಳಿಕೆಗಳನ್ನು ಪಡೆದುಕೊಂಡು ತನಿಖೆಯ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಪಿ. ಸಿ. 836 ರವರಿಗೆ ಚಾಸಾ–9 ರಿಂದ ಚಾಸಾ–11 ರವರನ್ನು ಕರೆದುಕೊಂಡು ಬರಲು ಆದೇಶ ನೀಡಿರುತ್ತೇನೆ. ನಂತರ ಆರೋಪಿತರನ್ನು ಕರೆದುಕೊಂಡು ಚಾಸಾ–2 ಮತ್ತು ಚಾಸಾ–4 ರವರು ಸಮಕ್ಷಮ ಘಟನಾ ಸ್ಥಳದಲ್ಲಿ ಪಂಚನಾಮೆಯನ್ನು ಬೆಳಗ್ಗೆ 08–15 ರಿಂದ 09–00 ಗಂಟೆಯ ರವರೆಗೆ ತಯಾರಿಸಿರುತ್ತೇನೆ. ನಿಪಿ–25 ರ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ–25(ಸಿ) ಎಂದು ಗುರುತಿಸಲಾಯಿತು. ನಿಪಿ–26 ಮತ್ತು ನಿಪಿ–27 ಭಾವಚಿತ್ರದಲ್ಲಿ ತನ್ನ ಇರುವಿಕೆಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

5) ನಂತರ ಸಿಬ್ಬಂದಿ, ಚಾಸಾ–2, 4 ಮತ್ತು ಆರೋಪಿತರು ಸೇರಿ ಅವರು ಮುಚ್ಚಿಟ್ಟ ಮುದ್ದೆ ಮಾಲನ್ನು ವಶಪಡಿಸಿಕೊಳ್ಳಲು ಹೋಗಿರುತ್ತೇವೆ. ಸದರಿ ಸ್ಥಳದಲ್ಲಿ ಆರೋಪಿತರು ತೋರಿಸಿದಂತೆ ಮುದ್ದೆ ಮಾಲನ್ನು ವಶಪಡಿಸಿಕೊಂಡು ಬೆಳಗ್ಗೆ 10–00 ರಿಂದ 12–30 ರವರೆಗೆ ಜಪ್ತು ಪಂಚನಾಮೆ ಮಾಡಿ ವಶಪಡಿಸಿಕೊಂಡಿರುತ್ತೇವೆ. ನಿಪಿ–28 ರ ಮೇಲೆ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ–28(ಇ) ಎಂದು ಗುರುತಿಸಲಾಯಿತು. ಆರೋಪಿತರಿಂದ 27 ಮೊಬೈಲಗಳನ್ನು ಮತ್ತು ಒಂದು ಕಟ್ಟರನ್ನು ವಶಪಡಿಸಿಕೊಂಡಿರುತ್ತೇವೆ. ನಿಪಿ–21 ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ ಮು.ಮಾ–2 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಿಪಿ–29 ರಿಂದ ನಿಪಿ–32 ಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

6) ನಂತರ ಪಾದದ ಮತ್ತು ಕೈ ಬೆರಳಿನ ಮುದ್ರೆಗಳನ್ನು ಪಡೆದುಕೊಂಡು ಪರೀಕ್ಷೆಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ದೂರುದಾರ ಮತ್ತು ಸಾಕ್ಷಿದಾರರನ್ನು ಕರೆಯಿಸಿಕೊಂಡು ಮುದ್ದೆ ಮಾಲು ಮತ್ತು ಆರೋಪಿತರನ್ನು ಗುರುತಿಸಲು ತಿಳಿಸಿರುತ್ತೇನೆ. ಚಾಸ-9 ರಿಂದ ಚಾಸಾ-11 ರವರನ್ನು ಠಾಣೆಗೆ ಬರಮಾಡಿಕೊಂಡು ನಿಪಿ-33 ರಂತೆ ಜಪ್ತು ಮೊಬೈಲಗಳ ಪಂಚನಾಮೆಯನ್ನು ಸಂಜೆ 05-30 ರಿಂದ 06-30 ರ ನಡುವಿನ ಅವಧಿಯಲ್ಲಿ ತಯಾರಿಸಿರುತ್ತೇನೆ. ಸದರಿ ಪಂಚನಾಮೆ ಕಾಲಕ್ಕೆ ನಿಪಿ-34 ರಿಂದ ನಿಪಿ-37 ರಂತೆ ಭಾವಚಿತ್ರಗಳನ್ನು ತೆಗೆದಿರುತ್ತೇವೆ.. ನಂತರ ಚಾಸಾ-9 ರಿಂದ ಚಾಸಾ–11 ರವರ ಹೇಳಿಕೆಗಳನ್ನು ಪಡೆದುಕೊಂಡು ತನಿಖೆಯ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

7) ಮಂಜುನಾಥರವರು ನೀಡಿದ ದೃಢೀಕರಣ ಪತ್ರವನ್ನು ಪಡೆದುಕೊಂಡು ತನಿಖೆಯ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ–40 ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–40(ಎ) ಎಂದು ಗುರುತಿಸಲಾಯಿತು. ಮಂಜುನಾಥರವರು ನೀಡಿದ ಸಿಡಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾಸಾ–15 ರವರಿಗೆ ವಹಿಸಿಕೊಟ್ಟಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು : ಆರೋಪಿತರ ಪರ ವಕೀಲರಿಂದ :**

ಚಾಸಾ-1 ನಮ್ಮ ಠಾಣೆಗೆ ಬಂದು ದೂರನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಂತರ ಸುಳ್ಳು ಪ್ರ. ವ. ವರದಿಯನ್ನು ತಯಾರಿಸಿ, ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-2 ಮತ್ತು ಚಾಸಾ-4 ರವರು ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ, ಹಾತ್ ನಕಾಶೆ ತಯಾರಿಸಿರುವುದಿಲ್ಲ ಮತ್ತು ಮುದ್ದೆ ಮಾಲುಗಳನ್ನು ಜಪ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಘಟನಾ ಸ್ಥಳವನ್ನು ತೋರಿಸಿರುವುದಿಲ್ಲ ಮತ್ತು ನಾವು ಅಲ್ಲಿ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಮೊಬೈಲಗಳನ್ನು ಜಪ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಭಾವಚಿತ್ರಗಳನ್ನು ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ಕೇವಲ ಈ ಪ್ರಕರಣಕ್ಕೆ ಅನೂಕುಲವಾಗಲೀ ಎನ್ನುವ ಉದ್ದೇಶದಿಂದ ಅಂಗಡಿಯಲ್ಲಿರುವ ಮೊಬೈಲಗಳ ಭಾವಚಿತ್ರಗಳನ್ನು ತೆಗೆದು ತನಿಖೆಯ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ನನ್ನ ಮೇಲಾಧಿಕಾರಿಗಳಾದ ಚಾಸಾ-15 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸ ಅದೆ.

ಸಹಿ/-

ಜೆಎಂಎಫ್‌ಸಿ, ಬ್ಯಾಡಗಿ.